ಶ್ರೀ ಬಿ. ಕರಿಬಸವನಗೌಡ.—ಹಿಂದಿನವರ್ಷ ಜಿಲ್ಲಾಧಿಕಾರಿಗಳು ಹರಪನಹಳ್ಳಿ ಮತ್ತು ಹಡಗಲಿಯಲ್ಲಿ ಒಂದು ಸಬ್‌ಸ್ಟೇಷನ್ ಮಾಡಬೇಕು ಎಂದು ಶಿಫಾರಸ್ ಮಾಡಿ ಸರ್ಕಾರಕ್ಕೆ ಕಳುಹಿಸಿದ್ದಾರೆ. ಅದರಂತೆ ಹಡಗಲಿಯವರು ಇದಕ್ಕೋಸ್ಕರ ಎರಡು ಎಕರೆ ಜಮೀನನ್ನು ಕೊಟ್ಟಿದ್ದಾರೆ. ಹರಪನಹಳ್ಳಿ ಮತ್ತು ಹಡಗಲಿಯಲ್ಲಿ ಸಬ್ ಸ್ಟೇಷನ್‌ನ್ನು ತಾವು ಮಾಡಲಿಕ್ಕೆ ಬೇಕು, ಯಾವಾಗ ಮಾಡುತ್ತೀರಿ?

ಶ್ರೀ ಡಿ. ದೇವರಾಜ ಅರಸ್.—ಈ ವರ್ಷ ಮಾತ್ರ ಮಾಡುವುದಕ್ಕಾಗುವುದಿಲ್ಲ.

ಶ್ರೀ ಬಿ. ಕರಿಬಸವನಗೌಡ.—ನಮ್ಮ ತಾಲ್ಲೂಕಿನಲ್ಲಿ ೧೯೭೮ ರವರೆಗೆ ಬೆಂಕಿ ಅನಾಹುತದಿಂದ ಎಷ್ಟು ನಷ್ಟವಾಗಿದೆ ಎನ್ನುವುದನ್ನು ತಮ್ಮ ಉತ್ತರದಲ್ಲಿ ಕೊಟ್ಟಿದ್ದೀರಿ, ಇತ್ತೀಚೆಗೆ ೧೯-೫-೧೯೭೯ ರಲ್ಲಿ ಕೊಂಜೂರು ತಾಂಡ ಎನ್ನುವಲ್ಲಿ ಸುಮಾರು ೪೬ ಗುಡಿಸಲುಗಳು ಸುಟ್ಟಿವೆ, ಸರ್ಕಾರದವರ ಹೇಳಿಕೆಯಂತೆಯೇ ಇದರಿಂದ ಸುಮಾರು ಒಂದೂವರೆ ಲಕ್ಷ ರೂಪಾಯಿಗಳ ನಷ್ಟವಾಗಿದೆ. ಈ ವಿಷಯದಲ್ಲಿ ಸರ್ಕಾರದವರು ಯಾವ ಕ್ರಮ ಕೈಗೊಳ್ಳುತ್ತಾರೆ?

ಶ್ರೀ ಡಿ. ದೇವರಾಜ ಅರಸ್.—ಜಿಲ್ಲಾ ಮಟ್ಟದಲ್ಲಿ ಇನ್ನೂ ನಮಗೆ ಫಯರ್ ಸ್ಟೇಷನ್‌ಗಳನ್ನು ಮಾಡಲಿಕ್ಕಾಗಿಲ್ಲ. ಜಿಲ್ಲಾ ಮಟ್ಟಗಳನ್ನು ಮುಗಿಸಿಕೊಂಡು ನಂತರ ತಾಲ್ಲೂಕು ಮಟ್ಟಕ್ಕೆ ಬರಬೇಕಾಗುತ್ತದೆ. ಇನ್ನು ಎಷ್ಟೋ ಜಿಲ್ಲೆಗಳಲ್ಲಿ ಅಂದರೆ, ಕೋಲಾರ, ಉತ್ತರ ಕನ್ನಡ ಚಿತ್ರದುರ್ಗ, ಮಂಡ್ಯ, ತುಮಕೂರು, ಮತ್ತು ಹಾಸನ, ಕೊಡಗು, ಬೀದರ್ ಜಿಲ್ಲೆಗಳಲ್ಲಿ ಫಯರ್ ಬ್ರಿಗೇಡ್ ಇಲ್ಲ. ಇವೆಲ್ಲಾ ನಾವು ಮುಗಿಸಬೇಕಾಗುತ್ತದೆ.

Facilities of Financial assistance from Central Government.

159. SRI ANANDA KUNDA HEGDE (Brahmavar)—Will the Minister for Finance be pleased to state ;—

(a) the items of developmental activities for which there is scope for the State getting the grants from the Central Government ;

(b) whether the Government would print and circulate in Kannada the different sources from which the State is likely to get grants from the Government of India ?

SRI S. M. YAHYA (Minister for Finance)

(a) The State Government gets the aid in the form of grant and loans for the following activities :—

(i) Grants for State Plan Schemes.

(ii) Grants for Centrally Sponsored Scheme.

(iii) Grants for Central Plan Schemes and

(iv) Some non-plan grants.

(b) In the Budget papers for 1978-79 the amount of aid likely to be given during this year by the Government of India is mentioned. This amount is based on the present plans and programmes likely to undergo some changes. In the detailed estimates of Revenue and other Receipts for 1978-79 under the headings "Aid from Central Government" at pages 135-155 and "Loans and Advances from Central Government" at pages 162-165 to be presented to Legislature every year, such aid in the form of grants and loans, is mentioned both in Kannada and English.

ಶ್ರೀ ಆನಂದಕುಂದ ಹೆಗ್ಗಡೆ.—ಕರ್ನಾಟಕ ರಾಜ್ಯದಲ್ಲಿ ಸಮುದ್ರ ಕೊರೆತಕ್ಕೆ ಕೇಂದ್ರ ಸರ್ಕಾರದಿಂದ ಏನಾದರೂ ಸಹಾಯ ಪಡೆದಿದ್ದೀರಾ ? ಪಡೆದಿದ್ದರೆ, ಯೋಜನೇತರ ಸಹಾಯವಾಗಿ ಪಡೆದಿದ್ದೀರಾ ಅಥವಾ ಸಾಲವಾಗಿ ಪಡೆದಿದ್ದೀರಾ ? ಹಾಗೆ ಪಡೆಯದಿದ್ದಲ್ಲಿ ಆಂಧ್ರ, ಕೇರಳ, ತಮಿಳನಾಡು ರಾಜ್ಯಗಳು ಸಾಕಷ್ಟು ಸಹಾಯವನ್ನು ಇದಕ್ಕೋಸ್ಕರ ಪಡೆದಿದ್ದಾರೆ, ಹಾಗೆ ತಾವು ಪಡೆಯಲಿಕ್ಕೆ ಪ್ರಯತ್ನ ಮಾಡುತ್ತೀರಾ ?

† ಶ್ರೀ ಎಸ್ ಎಂ. ಯಾಹ್ಯಾ;—ಕೇಂದ್ರ ಮತ್ತು ರಾಜ್ಯಗಳ ಹಣಕಾಸಿನ ವ್ಯವಹಾರದಲ್ಲಿ ಒಂದು ಪದ್ಧತಿ ಇದೆ. ಕಳೆದ ೩೦ ವರ್ಷಗಳಿಂದಲೂ ಈ ಒಂದು ಪದ್ಧತಿ ನಡೆದುಕೊಂಡು ಬಂದಿದೆ. ಇದರಲ್ಲಿ ಒಂದು ಸ್ಟೇಟ್‌ಗೆ ಹೆಚ್ಚು ಹಣ ದೊರಕಿದೆ, ಒಂದು ಸ್ಟೇಟ್‌ಗೆ ಕಡಿಮೆ ಹಣ ದೊರಕಿದೆ ಎಂದು ಹೇಳುವುದು ಬಹಳ ಕಷ್ಟ. ಆ ಒಂದು ಪದ್ಧತಿಯ ಪ್ರಕಾರ ಕೇಂದ್ರದವರು ಸಾಲದ ರೂಪದಲ್ಲಿ ನಂತರ ಗ್ರಾಂಟ್ ರೂಪದಲ್ಲಿ ಫೈನಾನ್ಸಿಯಲ್ ಅಸಿಸ್ಟೆನ್ಸ್ ಕೊಡುತ್ತಾರೆ. ಮೊದಲನೆಯದಾಗಿ ೧೯೭೭–೭೮ನೇ ಇಸವಿಯ ಅಂಕಿಸಂಖ್ಯೆಯನ್ನು ತೆಗೆದುಕೊಂಡರೆ ಸ್ಟೇಟ್‌ನ ಆನ್ಯೂಯಲ್ ಪ್ಲಾನ್‌ಗೆ ಗ್ರಾಂಟ್ ರೂಪದಲ್ಲಿ ೨೭ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ೬೧ ಕೋಟಿ ರೂಪಾಯಿಗಳನ್ನು ಕೇಂದ್ರದವರು ಕೊಟ್ಟಿದ್ದಾರೆ. ನಂತರ ಸೆಂಟ್ರಲ್ ಸ್ಪಾನ್ಸರ್ಡ್ ಸ್ಕೀಂನಲ್ಲಿ ಸುಮಾರು ೧೫ ಕೋಟಿ ರೂಪಾಯಿಗಳನ್ನು, ಮತ್ತು ಸಾಲದ ರೂಪದಲ್ಲಿ ೩ ಕೋಟಿ ರೂಪಾಯಿಗಳನ್ನು, ಸೆಂಟ್ರಲ್ ಪ್ಲಾನ್ ಅಸಿಸ್ಟೆನ್ಸ್‌ನಲ್ಲಿ ಗ್ರಾಂಟ್ ರೂಪದಲ್ಲಿ ೧೨ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ೩೨ಕೋಟಿ ರೂಪಾಯಿಗಳನ್ನು, ನಾನ್ ಪ್ಲಾನ್‌ನಲ್ಲಿ ಗ್ರಾಂಟ್ ಎರಡು ಕೋಟಿ ರೂಪಾಯಿಗಳು. ಲೋನ್–೧೮ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಈ ರೀತಿಯಾಗಿ ನಮಗೆ ೧೯೭೭–೭೮ರಲ್ಲಿ ಸುಮಾರು ೧೭೩ ಕೋಟಿ ರೂಪಾಯಿಗಳ ಅಸಿಸ್ಟೆನ್ಸ್ ಬಂದಿದೆ. ಇದರಲ್ಲಿ ಸಹಾಯವೂ ಇದೆ. ಸಾಲ ೧೧೬ ಕೋಟಿ ರೂಪಾಯಿಗಳು ಗ್ರಾಂಟ್ ೫೭ ಕೋಟಿ ರೂಪಾಯಿಗಳು ಇದೆ. ಆದರೆ ಪದ್ಧತಿ ಪ್ರಕಾರ ನಮಗೆ ಹಣ ಕೊಡುತ್ತಿದ್ದಾರೆ. ಆದರೆ ಎಲ್ಲರ ಭಾವನೆ ಏನೆಂದರೆ, ಎಲ್ಲಾ ಹಣವನ್ನು ಕೇಂದ್ರದವರು ಕೊಡುತ್ತಾರೆಂದು. ಪ್ಲಾನಿಂಗ್ ಕಮಿಷನ್‌ನಲ್ಲಿ ಮತ್ತು ಎನ್.ಡಿ.ಸಿ. ಯಲ್ಲಿ ನಾವು ಮಾತನಾಡಿಕೊಂಡು ಕೆಲಸ ಮಾಡಬೇಕಾಗಿದೆ. ೧೯೭೭–೭೮ರಲ್ಲಿ ೫೭ ಕೋಟಿ ರೂಪಾಯಿಗಳನ್ನು ಗ್ರಾಂಟ್ ರೂಪದಲ್ಲಿ ೧೧೬ ಕೋಟಿ ರೂಪಾಯಿಗಳನ್ನು ಸಾಲದ ರೂಪದಲ್ಲಿ ನಮಗೆ ಕೊಟ್ಟಿದ್ದಾರೆ ಇದು ನಮ್ಮ ನಾನ್ ಪ್ಲಾನ್ ಬಜೆಟ್ ೮೦೦ ಕೋಟಿ ರೂಪಾಯಿಗಳಿಗಿಂತಲೂ ಹೆಚ್ಚಾಗಿದೆ.

ಶ್ರೀ ಆನಂದಕುಂದ ಹೆಗ್ಗಡೆ:— ಕೇಂದ್ರ ಸರ್ಕಾರದವರು ಮೊನ್ನೆ ತಾನೇ ಉತ್ತರದ ದೇಶಕ್ಕೆ ವಿದ್ಯುಚ್ಛಕ್ತಿಯಿಂದುಂಟಾದ ನಷ್ಟಕ್ಕೆ ಸಹಾಯಧನ ಕೊಟ್ಟಿದ್ದಾರೆ ನಮ್ಮ ಸರ್ಕಾರದವರು ಏನಾದರೂ ಇಂಥ ಸಹಾಯ ಧನವನ್ನು ಪಡೆದಿದ್ದಾರೆಯೇ ?

ಶ್ರೀ ಎಸ್. ಎಂ. ಯಾಹ್ಯಾ.— ಕೇಂದ್ರದವರು ಬೇರೆ ಬೇರೆ ರಾಜ್ಯಗಳಿಗೆ ಬೇರೆ ಬೇರೆ ರೀತಿಯಲ್ಲಿ ಸಹಾಯ ಮಾಡುವುದಿಲ್ಲ. ಅವರು ಪ್ಯಾಟರ್ನ್ ಪ್ರಕಾರ ಸಹಾಯ ಮಾಡುತ್ತಾರೆ. ಕೆಲವು ರೆವಿನ್ಯೂ ಸರ್ಪ್ಲಸ್ ಇರತಕ್ಕ ಸ್ಟೇಟ್‌ಗಳು ಇವೆ. ಕೆಲವು ಬ್ಯಾಕ್‌ವರ್ಡ್ ಇರತಕ್ಕ ಸ್ಟೇಟ್‌ಗಳು ಇವೆ, ಆರ್ಟಿಕಲ್ ೨೭೫ ಪ್ರಕಾರ ಅವರಿಗೆ ಡಿಸ್ಕ್ರಿಷನರಿ ಅಮೌಂಟ್ ಇರುತ್ತದೆ, ಆದ್ದರಿಂದ ಡಿಸ್ಕ್ರಿಷನರಿಯಾಗಿ ಕೊಡಲಿಕ್ಕೆ ಸಾಧ್ಯವಿದೆ. ಈ ಪದ್ಧತಿಯನ್ನು ತೀರಾ ಕಡಿಮೆ ಮಾಡಬೇಕು ಎಂದು ಕಳೆದ ಎರಡು ವರ್ಷಗಳಲ್ಲಿ ಕಡಿಮೆ ಮಾಡಿದ್ದಾರೆ. ೨೫೯೦ ಕೋಟಿ ರೂಪಾಯಿಗಳ ಸೆಂಟ್ರಲ್ ಪ್ಲಾನ್ ಸ್ಕೀಂನಲ್ಲಿ ತೆಗೆದು ಇವರಿಗೆ ಕೊಟ್ಟಿದ್ದಾರೆ.

Agricultural Income Tax, Difficulties of farmers to file accounts

194. SRI PRABHAKAR TELKAR (Chitapur):—Will the Minister for Finance be pleased to state:—

(a) whether it has come to the notice of the Government that notices have been issued to Agriculturists, holding more than 25 acres of land to pay Agricultural Income-Tax and to submit accounts;